# ಮೂಡೆ ಕಟ್ಟಿ ಗೂಡು ಕಟ್ಟಿದವರು

(6ನೇ ಪುಟದಿಂದ)





ಕೇದಿಗೆ ಎಲೆ ಸಂಗ್ರಹಿಸಿ ತರುವುದು ಪತಿ ಹರೀಶರ ಕೆಲಸವಾದರೆ ಮೂಡೆ ಕಟ್ಟುವುದು ಹೆಂಡತಿ ಸುರೇಖಾ ಅವರ ಕೈಚಳಕ. ಕೇದಿಗೆ, ಕೇದಗಿ, ಕೇತಕಿ, ಕೇತಕೆ ಎಂದು ಕರೆಯಲ್ಪಡುವ ಕೇದಗೆಗೆ 'ಸ್ಕ್ರ್ಯೂಪೈನ್ ಲೀಫ್' ಎಂಬ ಇಂಗ್ಲಿಷ್ ಹೆಸರಿದೆ. ಇವು ಸಾಮಾನ್ಯವಾಗಿ ಕೆರೆ, ತೋಡು ಹಾಗೂ ಹಿನ್ನೀರಿನ ಜೌಗು ಪ್ರದೇಶಗಳಲ್ಲಿ ಕಂಡುಬರುವುದಾಗಿದ್ದು ಎಲೆಗಳ ತಳಭಾಗದಲ್ಲಿ ಚೂಪಾದ ಮುಳ್ಳುಗಳಿರುತ್ತವೆ. ಹಾಗಾಗಿಯೇ ಇವುಗಳನ್ನು ಸಂಗ್ರಹಿಸುವುದು ಒಂದು ಸಾಹಸವೇ ಸರಿ. ಕೆರೆಯಲ್ಲಿ ತುಂಬಿರುವ ಹೂಳು, ಹಾವು, ಚೇಳು, ಏಡಿ ಮೊದಲಾದ ವಿಷಕಾರಿ ಜಲಚರ ಪ್ರಾಣಿಗಳು ಕೆಲಸವನ್ನು ಇನ್ನಷ್ಟು ಕಠಿಣವಾಗಿಸುತ್ತವೆ. ಬಿದಿರಿನ ಉದ್ದನೆಯ ಕೋಲುಗಳನ್ನು ನೀರಿನ ಮೇಲೆ ಅಡ್ಡ ಹಾಕಿ ಅದರ ಮೇಲೆ ನಿಂತು ಕತ್ತಿ ಕಟ್ಟಿದ ಕೊಕ್ಕೆ(ಗಳ)ಯಿಂದ ಗಡವನ್ನು ಕತ್ತರಿಸಿ ದಂಡೆಗೆ ಎಳೆಯಬೇಕು. 30ರಿಂದ 35 ಕಿಲೋ ತೂಗುವಷ್ಟು ಸಂಗ್ರಹವಾದ ಮೇಲೆ ಅವುಗಳನ್ನು ಕಟ್ಟ ಕಟ್ಟಿ ಮನೆಗೆ ತರಬೇಕು ಎನ್ನುತ್ತಾರೆ ಹರೀಶ್.

ಅನಂತರದ ಕೆಲಸ ಪತ್ನಿ ಸುರೇಖಾ ಅವರದು. ಚೂರಿಯನ್ನು ಉಪಯೋಗಿಸಿ ಜಾಗರೂಕತೆಯಿಂದ ಕೇದಗೆ ಎಲೆಗಳಿಂದ ಮುಳ್ಳುಗಳನ್ನು ಬಿಡಿಸುವುದು ಮೊದಲ ಕೆಲಸ. ಅನಂತರ ತೆಂಗಿನ ಗರಿಯನ್ನು ಹೊತ್ತಿಸಿ ಅದರ ಬೆಂಕಿಗೆ ಕೇದಿಗೆ ಎಲೆಯನ್ನು ಬಾಡಿಸುವುದರಿಂದ ಎಲೆ ಮೆದುವಾಗುವುದಲ್ಲದೆ ಪರಿಮಳವೂ ಹೆಚ್ಚುತ್ತದೆ. ಅನಂತರ ಎಲೆಯನ್ನು ಸುರುಳಿ ಸುತ್ತಿ ನೆಲದ ಮೇಲೆ ಒತ್ತಿ ತಿಕ್ಕಬೇಕು. ಇದರಿಂದ ಮೂಡೆ ಕಟ್ಟುವುದು ಸುಲಭವಾಗುತ್ತದೆ. ತೆಂಗಿನ ಗರಿಯ ಕಡ್ಡಿಯನ್ನು ಚೂಪಾಗಿ ಕತ್ತರಿಸಿಟ್ಟುಕೊಂಡು ಕೇದಗೆ ಎಲೆಯನ್ನು ಸುತ್ತುತ್ತಾ ಕಡ್ಡಿಯಿಂದ ಚುಚ್ಚಿ ಭದ್ರಗೊಳಿಸಿ ಮೂಡೆ ತಯಾರಿಸಬೇಕು. ಎಲೆ ತೂತಾಗಿದ್ದರೆ ಅಥವಾ ಹರಿದಿದ್ದರೆ ಇನ್ನೊಂದು ತುಂಡು ಎಲೆಯನ್ನು ಇಟ್ಟು ಪ್ಯಾಚ್ ಮಾಡಬೇಕಾಗುತ್ತದೆ ಎನ್ನುತ್ತಾರೆ ಸುರೇಖಾ.

ಮುಕ್ಕಾಲು ಅಡಿ ಉದ್ದದ ಮೂಡೆ ತಯಾರಿಸಲು 1.5ಯಿಂದ ಎರಡು ಎಲೆಗಳು ಬೇಕಾಗುತ್ತವೆ. ಸಣ್ಣದಕ್ಕೆ ಒಂದು ಎಲೆ ಸಾಕು. ದಿನಕ್ಕೆ ಸರಾಸರಿ 300 ಮೂಡೆ ತಯಾರಿಸಬಹುದು. ಬೇಡಿಕೆ ಬಂದ ಹಾಗೆ ಹೆಚ್ಚು ಬೇಕಾದರೂ ಮಾಡಬಹುದು. ಮೂಡೆಯ ಗಾತ್ರಕ್ಕೆ ಅನುಗುಣವಾಗಿ 15 ರಿಂದ 20 ರೂಪಾಯಿ ದರ ಸಿಗುತ್ತದೆ. ದೂರದ ಬೆಂಗಳೂರು, ಮುಂಬಯಿಯಿಂದಲೂ ಬೇಡಿಕೆ ಬರುತ್ತದೆ. ಒದ್ದೆ ಬಟ್ಟೆಯಲ್ಲಿ ಮುಚ್ಚಿಟ್ಟರೆ 2–3 ದಿವಸ ಹಾಳಾಗದಂತೆ ಇಡಬಹುದು, ಒಣಗಿದರೆ ಬೂಸರು ಬಂದು ಹಾಳಾಗುತ್ತದೆ.

ಮೂಡೆ ಮರೆಯಾಗುವ ಮುನ್ನ ಕೇದಗೆ ಗಿಡವನ್ನು ಉಳಿಸಬೇಕಿದೆ. ಅಂದರೆ ಕೆರೆ, ತೋಡುಗಳನ್ನು ಜೀವಂತವಿರಿಸಬೇಕಿದೆ. ಮೂಡೆಯ ಉಳಿವು ಜಲಸಂರಕ್ಷಣೆಗೆ ದಾರಿ ಮಾಡಿಕೊಡಬಹುದು, ಅಲ್ಲವೇ?